# ನೋವು ನಲಿವು ಕಂಡಿದ್ದೇನೆ

**ಸ್ವಾತಿ ಎಚ್.ವಿ.**

**ಸ್ಟಾರ್‌ಸುವರ್ಣದ 'ಸರ್ವಮಂಗಳ ಮಾಂಗಲ್ಯೇ'ದ ಭೈರವಿ**



***★ ವೃತ್ತಿ ಬದುಕಿನ ಮಧ್ಯಂತರ ವಿರಾಮ ಏಕಾಯಿತು?***

ಶಿವಣ್ಣ ಅವರ 'ಮಾದೇಶ' ಸಿನಿಮಾದಲ್ಲಿ ಎರಡನೇ ಮುಖ್ಯ ಪಾತ್ರದ ಮೂಲಕ ಬೆಳ್ಳಿತೆರೆಗೆ ತೆರೆದುಕೊಂಡೆ. ನಂತರ ಸುಮಾರು 12 ಸಿನಿಮಾಗಳನ್ನು ಮಾಡಿದೆ. ಆ ಹೊತ್ತಿಗೆ ನನ್ನ ಬದುಕ ಹಾದಿಯಲ್ಲಿ ದುರಂತ ಸಂಭವಿಸಿತು. ದೊಡ್ಡ ಅಪಘಾತವಾಗಿ ನಾನು ಬದುಕಿದ್ದೇ ಹೆಚ್ಚು. ದೇಹದ ಬಲಭಾಗ ಸಂಪೂರ್ಣ ಊನವಾಗಿತ್ತು. ಅದರಿಂದ ಮೇಲೇಳಲು ನನಗೆ ಮೂರು ವರ್ಷಗಳು ಬೇಕಾದವು. ಅದಾದ ಮೇಲೆ ವೃತ್ತಿ ಬದುಕಿನ ಅಲೆದಾಟ ಸಾಕಷ್ಟು ಪಾಠಗಳನ್ನು ಕಲಿಸಿದೆ. 'ನಗುವಾಗ ಎಲ್ಲಾ ನೆಂಟರು ಅಳುವಾಗ ಯಾರೂ ಇಲ್ಲ' ಎಂಬ ಮಾತನ್ನು ಸ್ವತಃ ನಾನೇ ಎದುರಿಸಿದ್ದೇನೆ. ಝೀ ಕನ್ನಡದಲ್ಲಿ 'ಶುಭವಿವಾಹ'ದ ಮೂಲಕ ಕಿರುತೆರೆಯಲ್ಲಿ ಎರಡನೇ ಆವೃತ್ತಿ ಆರಂಭವಾಗಿದೆ.

***★ ಬಣ್ಣದ ಮೋಹ ಹುಟ್ಟಿದ್ದು ಹೇಗೆ?***

'ಪ್ಯಾಟಿ ಹುಡ್ಗೀರ್ ಹಳ್ಳಿ ಲೈಫ್' ನನ್ನನ್ನು ಬಣ್ಣದ ಜಗತ್ತಿಗೆ ಪರಿಚಯಿಸಿತು. ಅದಕ್ಕೂ ಮುನ್ನ ಸನ್‌ಸಿಲ್ಕ್ ನಡೆಸಿದ 'ಮಿಸ್ ಕರ್ನಾಟಕ' ಸ್ಪರ್ಧೆಯ ವಿನ್ನರ್ ಆಗಿದ್ದೆ. ಅದರ ಜೊತೆಗೆ 'ಐ ಬ್ಯೂಟಿ' 'ಫೋಟೋಜೆನಿಕ್' ಪುರಸ್ಕಾರಗಳೂ ಅದೇ ಸ್ಪರ್ಧೆಯಲ್ಲಿ ಸಿಕ್ಕಿದ್ದವು. ಇವೆಲ್ಲಾ ನನಗೆ ನಟಿಯಾಗುವ ಅವಕಾಶವನ್ನು ಕಲ್ಪಿಸಿದವು. ನಟಿಯಾಗಿದ್ದು ತೀರಾ ಆಕಸ್ಮಿಕ. ವೈದ್ಯೆ ಆಗುವ ಕನಸು ನನಗಿತ್ತು. ಡಿಪ್ಲೊಮಾ ಇನ್ ಜ್ಯುವೆಲರಿ ಡಿಸೈನಿಂಗ್ ಮಾಡಿದೆ. ಆದರೆ ಎರಡೂ ಆಗಲಿಲ್ಲ. ಆಭರಣ ವಿನ್ಯಾಸ ಮಾಡುವುದು ಹವ್ಯಾಸ ಆಗಿದೆ. ನಟನೆ ವೃತ್ತಿಯಾಗಿದೆ.

***★ ನಿಮ್ಮ ಕಿರುತೆರೆಯ ಅನುಭವವನ್ನೇ ಹೇಳುವುದಾದರೆ...***

'ಸರ್ವಮಂಗಳ ಮಾಂಗಲ್ಯೇ' ಐವತ್ತನೇ ಕಂತನ್ನು ಪೂರೈಸಿದೆ. ಇದರಲ್ಲಿ ನಮ್ಮ ಮನೆಯ ವಾತಾವರಣ ಲೇಡಿಸ್ ಹಾಸ್ಟೆಲ್ ಇದ್ದಂತಿದೆ. ಒಂದೇ ಕುಟುಂಬದವರಂತೆ ನಾವೆಲ್ಲ ಇದ್ದೇವೆ. ಕಥೆಯೂ ಕುತೂಹಲದಾಯಕವಾಗಿದೆ. ಭೈರವಿಯಂತೆಯೇ ನಾನು ಬಹುತೇಕ ನೆಗೆಟಿವ್ ಪಾತ್ರಗಳನ್ನೇ ನಿರ್ವಹಿಸಿದ್ದೇನೆ. ಯಾವ ಪಾತ್ರವೂ ಒಂದರಂತೆ ಮತ್ತೊಂದಿಲ್ಲ.

***★ ನಿಮಗೆ ಕೆಟ್ಟವರು ಎನ್ನುವ ಪಟ್ಟವನ್ನು ಯಾರೂ ಕಟ್ಟಿಲ್ವಾ?***

ಆ ರೀತಿಯ ಅನುಭವ ಆಗುತ್ತಲೇ ಇರುತ್ತದೆ. ಇಲ್ಲಿ ಚಂದನ್ ಅವರ ಚಿಕ್ಕಮ್ಮನ ಪಾತ್ರ ನಿರ್ವಹಿಸುತ್ತಿದ್ದೇನೆ. ವಯಸ್ಸಿನಲ್ಲಿ ತುಂಬಾ ಚಿಕ್ಕವಳಾಗಿದ್ದರೂ ದೊಡ್ಡವಳಾಗಿ ಅಭಿನಯಿಸಬೇಕು. ಅದರಲ್ಲೂ ಘಟವಾಣಿ ಅತ್ತೆಯಾಗಿ. ಇದನ್ನು ತುಂಬಾ ಜನ ಆಕ್ಷೇಪಿಸಿದ್ದಾರೆ. 'ಮೇಡಂ ಯಾಕೆ ಸೊಸೆಗೆ ಅಷ್ಟು ಕಿರುಕುಳ ಕೊಡ್ತೀರಾ? ನಿಮ್ಮ ಹಾಗೆ ಅವಳೂ ಅಲ್ವಾ?' ಎನ್ನುತ್ತಾರೆ. ಸ್ವಲ್ಪ ಸಿಟ್ಟು ಕಡಿಮೆ ಮಾಡಿಕೊಳ್ಳಿ. ಆರೋಗ್ಯಕ್ಕೆ ಅದು ಒಳ್ಳೆಯದಲ್ಲ ಎನ್ನುವ ಸಲಹೆ ಕೂಡ ವ್ಯಕ್ತವಾಗಿದೆ. ಇದು ಮೈಸೂರಿನಲ್ಲಿ ಚಿತ್ರೀಕರಣ ಆಗುತ್ತಿದೆ. ಮೊನ್ನೆ ಚಾಮುಂಡಿ ಬೆಟ್ಟಕ್ಕೆ ಹೋಗುವಾಗ ಒಬ್ಬರು ಬಂದು 'ಕೋಪ ಕಡಿಮೆ ಮಾಡಿಕೊಳ್ಳಿ ತಾಯಿ' ಎಂದು ಹೇಳಿದರು. ಇದೆಲ್ಲಾ ನನಗೆ ಖುಷಿಯನ್ನು ಕೊಡುತ್ತದೆ.

■ **ರಾಘವೇಂದ್ರ**